ಅಧ್ಯಕ್ಷತೆಯಲ್ಲಿ ಒಂದು ನೌಕರರ ಸಮಿತಿಯನ್ನು ರಚಿಸಲಾಗಿದ್ದು ಈ ನೌಕರರ ಸಮಿತಿಯು ಏಪ್ರಿಲ್ 2003ರಲ್ಲಿ ನೀಡಿರುವ ವರದಿಯಲ್ಲಿ (i) ಆಟೋಮೋಬೈಲ್ ಕೈಗಾರಿಕೆಗಳು (ii) ಜೆವಳ್ ಮತ್ತು ಜೂಂಯಲರಿ ಉದ್ಯಾನವನ, (iii) ಪ್ರವಾಸೋದ್ಯಮ ಮತ್ತು ಮನೋರಂಜನಾ ಕೇಂದ್ರಗಳು ಹಾಗೂ (iv) ಆರೋಗ್ಯ ಕ್ಷೇತ್ರದಲ್ಲಿ ಚಟುವಟಿಕೆಗಳನ್ನು ಕೈಗೊಳ್ಳಬಹುದೆಂದು ಶಿಫಾರಸ್ಸು ಮಾಡಲಾಗಿದೆ. ಜೊತೆಗೆ ಬೃಹತ್ ಪ್ರಮಾಣದ ಕೃಷಿ ವ್ಯಾಪಾರ, ಕೃಷಿ ಆಧಾರಿತ ಕೈಗಾರಿಕೆಗಳು ಮತ್ತು ಕಾರ್ಪೋರೇಟ್ ಕೃಷಿ ಕಾರ್ಯಯೋಜನೆಯ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಶಿಫಾರಸ್ಸು ಮಾಡಿದೆ.

ಮೇಲ್ಕಂಡ ನೌಕರರ ಸಮಿತಿಯ ಶಿಫಾರಸ್ಸುಗಳನ್ನು ಗಮನದಲ್ಲಿರಿಸಿಕೊಂಡು ರಾಷ್ಟ್ರದ ಮತ್ತು ವಿದೇಶಿ ಕಂಪನಿಗಳನ್ನು ಸಂಪರ್ಕಿಸಿ ಸರ್ಕಾರವು ಇಂಜಿನಿಯರಿಂಗ್, ಆಟೋಮೋಬೈಲ್, ಆಗ್ರೋ ಆಫ್ ಪ್ರೋಸೆಸಿಂಗ್, ಜವ್ಳ್ ಮತ್ತು ಜುಯಲರಿ ಪಾರ್ಕ್ ಮತ್ತು ಪ್ರವಾಸೋದ್ಯಮ, ಕೈಗಾರಿಕಾ ಘಟಕಗಳನ್ನು ಕೆ.ಜಿ.ಎಫ್.ನಲ್ಲಿ ಸ್ಥಾಪಿಸಲು ಪ್ರಯತ್ನಿಸಲಾಗುವುದು.

ಪ್ರಾರಂಭಿಕವಾಗಿ, ಈ ದಿಸೆಯಲ್ಲಿ ಕ್ರಮ ಕೈಗೊಳ್ಳುವ ಮೊದಲು ಬಿ.ಜೆ.ಎಮ್.ಎಲ್/ಕೇಂದ್ರ ಸರ್ಕಾರದ ವಶದಲ್ಲಿರುವ ಮೇಲ್ಕಂಡ ಜಮೀನಿನ ಭಾಗಶ: ಪ್ರದೇಶವನ್ನು ರಾಜ್ಯಮಟ್ಟದ ಸಂಸ್ಥೆಯಾದ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ ವರ್ಗಾಯಿಸಲು ಕ್ರಮಕೈಗೊಳ್ಳುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗುವುದು.

667(500) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಮನಗರದಲ್ಲಿ ನಿವೇಶನಗಳನ್ನು ನಿರ್ಮಿಸಲು ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ಖರ್ಚು ಮಾಡಿದ ಹಣವೆಷ್ಟು;

ಆ) ಈ ನಿವೇಶನಗಳನ್ನು ಯಾವಾಗ ಸಿದ್ಧಪಡಿಸಲಾಯಿತು; ಹಾಗೂ ಎಷ್ಟು ನಿವೇಶನಗಳನ್ನು ನಿರ್ಮಾಣ ಮಾಡಲಾಗಿದೆ;

ಇ) ಈ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ; ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಈ) ಈ ನಿವೇಶನಗಳನ್ನು ನಿರ್ಮಿಸಲು ಗುರುತಿಸಲಾದ ಜಾಗ ಸರಿಯಾಗಿಲ್ಲದಿರುವುದರಿಂದ ಈ ನಿವೇಶನಗಳಿಗೆ ಬೇಡಿಕೆ ಇಲ್ಲದೆ ಮೇಲ್ಕಂಡ ನಿಗಮ ಹಣ ದುರ್ವಿನಿಯೋಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಬಗ್ಗೆ ಕೂಡಲೇ ವಿಚಾರಣೆಗೆ ಸರ್ಕಾರ ಆದೇಶಿಸುತ್ತದೆಯೇ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು)

ಅ) ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ರಾಮನಗರದ ಶಿಡ್ಲಕಲ್ಲು ಹಾಗೂ ಜೀಗೇನಹಳ್ಳಿಯಲ್ಲಿ ನಿರ್ಮಿಸಿರುವ ವಸತಿ ನಿವೇಶನದ ಯೋಜನೆಗೆ ಒಟ್ಟು 6.23 ಕೋಟಿ ರೂ.ಗಳ ವೆಚ್ಚ (ಭೂಸ್ವಾಧೀನದ ವೆಚ್ಚವೂ ಸೇರಿ)ದನ್ನು ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮವು ಮಾಡಿರುತ್ತದೆ.

ಆ) ಈ ನಿವೇಶನಗಳನ್ನು ಮೇ 2001ರಲ್ಲಿ ಸಿದ್ಧಪಡಿಸಲಾಯಿತು. ಜೀಗೇನಹಳ್ಳಿಯಲ್ಲಿ 564 ನಿವೇಶನಗಳನ್ನು ಮತ್ತು ಶಿಡ್ಲಕಲ್ಲುನಲ್ಲಿ 204 ನಿವೇಶನಗಳನ್ನು ಒಟ್ಟು 768 ನಿವೇಶನಗಳನ್ನು ನಿರ್ಮಿಸಲಾಗಿದೆ.

ಇ) ಈ ನಿವೇಶನಗಳ ಹಂಚಿಕೆಯನ್ನು ಇನ್ನೂ ಮಾಡಲಾಗಿಲ್ಲ. ಈ ನಿವೇಶನಗಳ ಹಂಚಿಕೆಗೆ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ರಾಮನಗರ, ಚೆನ್ನಪಟ್ಟಣ ನಗರಾಭಿವೃದ್ಧಿ ಪ್ರಾಧಿಕಾರವು ಕೊಟ್ಟಿದ್ದು ಇದಕ್ಕೆ ಅತಿ ಕಡಿಮೆ ಅರ್ಜಿಗಳು ಬಂದಿದ್ದು, ನಿವೇಶನಗಳ ಹಂಚಿಕೆ ಮಾಡಲಾಗಿಲ್ಲ.

ತದ ನಂತರ, ಕರ್ನಾಟಕ ರಾಜ್ಯ ಸರ್ಕಾರಿ ನೌಕರ ಸಂಘದವರು 30x40 ಅಳತೆಯ ನಿವೇಶನಗಳನ್ನು ಒಟ್ಟಾಗಿ ಸಂಘದ ಸದಸ್ಯರಿಗೆ ಹಂಚಿಕೆ ಮಾಡಲು ಕೋರಿದ್ದರು. ಆದರೆ ಅವರು ನಿವೇಶನಗಳ ಬೆಲೆಯನ್ನು ಅತಿ ಕಡಿಮೆಗೆ ಕೇಳಿದ್ದರಿಂದ ನಿವೇಶನಗಳನ್ನು ಹಂಚಲಾಗಿಲ್ಲ.

ಈ) ಈ ನಿವೇಶನಗಳನ್ನು ನಿರ್ಮಿಸಲು ಜಮೀನನ್ನು ರಾಮನಗರ ನಗರ ಸಭೆಯವರೇ ಆಯ್ಕೆ ಮಾಡಿರುತ್ತಾರೆ ಹಾಗೂ ಈ ಜಮೀನನ್ನು ಬಿಟ್ಟು ಇನ್ನೆಲ್ಲೂ ಜಾಗ ಹೊರಕದಿದ್ದ ಕಾರಣದಿಂದ ನಿವೇಶನಗಳನ್ನು ಶಿಡ್ಲಕಲ್ಲು ಹಾಗೂ ಜೀಗೇನಹಳ್ಳಿಯಲ್ಲಿ ನಿರ್ಮಿಸಲಾಯಿತು. ನಿವೇಶನಗಳನ್ನು ಉತ್ತಮ ರೀತಿಯಲ್ಲಿ ನಿರ್ಮಿಸಿದ್ದು, ಯಾವುದೇ ಹಣವು ದುರ್ವಿನಿಯೋಗವಾಗಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

668(631) : ಶ್ರೀ ಕೃಷ್ಣ ಪಾಲೇಮಾರ್ (ಸುರತ್ಕಲ್) ಮಾನ್ಯ ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುರತ್ಕಲ್ ನಗರ ಪ್ರದೇಶಕ್ಕೆ ಅಗತ್ಯವುಳ್ಳ ಒಳಚರಂಡಿ ಯೋಜನೆಯನ್ನು ಸರಕಾರ ರೂಪಿಸಿದೆಯೇ; (ವಿವರವನ್ನು ನೀಡುವುದು);

ಆ) ಒಳಚರಂಡಿ ಯೋಜನೆಯನ್ನು ಯಾವಾಗ ಜಾರಿಗೆ ತರಲಾಗುವುದು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆಯುಐಡಿಎಫ್‌ಸಿ ಸಚಿವರು)

ಅ) ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ನ ಸಾಲದ ನೆರವಿನೊಂದಿಗೆ ರಾಜ್ಯದಲ್ಲಿ